UASB Library
Newspaper Clippings
Saturday 14-01-2023 Pg .1
Jai Kisan

ತರಬೇತಿಗೆ ತೆರೆ ಕೃಷಿ ಪತ್ರಿಕೋದ್ಯಮ ಕಾರ್ಯಕ್ರಮ ಸಮಾರೋಪ | ಸಾಧಕ ಕೃಷಿಕರು ಇತರ ಕೃಷಿಕರಿಗೆ ಮಾಹಿತಿ ನೀಡಿ: ವೀಸಿ

ರೈತರ ಯಶೋಗಾಥೆ ಪ್ರಕಟಿಸಿ: ಡಾ.ಸುರೇಶ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೈತರ ಯಶೋಗಾಥೆಗಳನ್ನು ಮಾಧ್ಯಮದಲ್ಲಿ ಫೋಟೋ ಸಮೇತ ಪ್ರಕಟಿಸಲು ವಿಜ್ಞಾನಿಗಳು, ವಿಸ್ತರಣಾ ಕಾರ್ಯಕರ್ತರು ಮುಂದಾಗಬೇಕು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ। ಎಸ್.ವಿ.ಸುರೇಶ್ ಅಭಿಪ್ರಾಯಪಟ್ಟರು.

ಕೃಷಿ ವಿವಿ ಮತ್ತು ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಶುಕ್ರವಾರ ಜಿಕೆವಿಕೆಯಲ್ಲಿ ಆತ್ಮ ಸಿಬ್ಬಂದಿ ಮತ್ತು ಪ್ರಾಧ್ಯಾಪಕರಿಗೆ ಏರ್ಪಡಿಸಿದ್ದ 'ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ' ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ತಂತ್ರಜ್ಞಾನಗಳನ್ನು ಸಾಮಾನ್ಯ ಜನರಿಗೆ, ಅದರಲ್ಲೂ ಮುಖ್ಯವಾಗಿ ರೈತರಿಗೆ ಶೀಘ್ರವಾಗಿ ತಲುಪಿಸಲು ಕೃಷಿ ಪತ್ರಿಕೋದ್ಯಮ ಕುರಿತು ವಿಜ್ಞಾನಿಗಳು, ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ ಹಮ್ಮಿಕೊಂಡಿರುವುದು ಸಂತಸದ ವಿಷಯ. ರೈತರ ಯಶೋಗಾಥೆಗಳನ್ನು ನೀವು ಸರಳವಾಗಿ ಫೋಟೋ ಸಹಿತ ಮಾಧ್ಯಮದಲ್ಲಿ ಪ್ರಕಟಿಸಿ. ಇದರಿಂದ ಉಳಿದ ರೈತರಿಗೂ ಸ್ಫೂರ್ತಿ ನೀಡಿದಂತೆ ಆಗುತ್ತದೆ ಎಂದು ಬಣ್ಣಿಸಿದರು.



ಬೆಂಗಳೂರು ಕೃಷಿ ವಿವಿ ಮತ್ತು ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ' ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ವಿವಿ ಕುಲಪತಿ ಡಾ। ಎಸ್.ವಿ.ಸುರೇಶ್ ತೆಂಗಿನ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ತಂತ್ರಜ್ಞಾನ ಹೆಚ್ಚಿನ ಮಹತ್ವ ಪಡೆಯುತ್ತಿದೆ. ದೃಶ್ಯ ಮತ್ತು ಮುದ್ರಣ ಮಾಧ್ಯಮವಲ್ಲದೇ ಸಾಮಾಜಿಕ ಜಾಲತಾಣಗಳೂ ಹೆಚ್ಚಿನ ಜನರನ್ನು ತಲುಪಲು ಸಹಾಯಕವಾಗುವುದರಿಂದ ಈ ನಿಟ್ಟಿನಲ್ಲೂ ಕಾರ್ಯೋನ್ಮುಖವಾಗಬೇಕು. ತರಬೇತಿಯಲ್ಲಿ ಪಡೆದ ಜ್ಞಾನವನ್ನು ಸಹೋದ್ಯೋಗಿಗ ಳೊಂದಿಗೆ ಹಂಚಿಕೊಂಡರೆ ಇನ್ನಷ್ಟು ಜನರನ್ನು ತಲುಪಲಿದೆ ಎಂದು ವಿವರಿಸಿದರು.

ವಿಸ್ತರಣಾ ನಿರ್ದೇಶಕ ಡಾ। ಕೆ.ನಾರಾಯಣ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕರಾದ ಡಾ। ಎ.ಶೈಲಜಾ, ಡಾ। ಆರ್.ವಸಂತ, ಜಿಕೆವಿಕೆಯ ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥ ಡಾ। ಕೆ.ಶಿವರಾಮು, ಪ್ರಾಧ್ಯಾಪಕರಾದ ಡಾ। ಬಿ.ಕಲ್ಪನಾ, ಡಾ। ಆರ್.ನಾರಾಯಣರೆಡ್ಡಿ, ಸಿ.ವಿ. ವೆಂಕಟೇಶ ಮೂರ್ತಿ ಉಪಸ್ಥಿತರಿದ್ದರು.

14-01-2023
Kannadaprbha Pg 02

ಈನಾಡು ಕರ್ಣಾಟಕ
ಶನಿವಾರಂ ಜನವರಿ 14, 2023



ಮొక్కకు నీరు పోసి కార్యక్రమాన్ని ప్రారంభిస్తున్న ఉపకులపతి డాక్టర్ సురేష్, డాక్టర్ నారాయణగౌడ, డాక్టర్ శైలజ, డాక్టర్‌వసంత, డాక్టర్ శివరాం తదితరులు

ఆధునిక వ్యవసాయ పద్ధతులు రైతులకు చేరాలి

బెంగళూరు(యశ్వంతపుర),న్యూస్‌టుడే: ఆధునిక వ్యవసాయ పద్ధతులను రైతులకు చేరవేసే బాధ్యతను మాధ్యమాలు స్వీకరించాలని బెంగళూరు వ్యవసాయ విశ్వవిద్యాలయం ఉపకులపతి డాక్టర్ ఎస్.వి.సురేష్ పిలుపునిచ్చారు. బెంగళూరు వ్యవసాయ విశ్వవిద్యాలయం, హైదరాబాద్ వ్యవసాయ విస్తరణ శిక్షణ సంస్థ సంయుక్తంగా నిర్వహించిన శిక్షణ శిబిరం ముగింపు కార్యక్రమం శుక్రవారం జీకేవీకే ఆవరణలో జరిగింది. కార్యక్రమానికి హాజరైన ఆయన మాట్లాడుతూ రైతుల పంట సాగులో సాధించిన విజయాలను వెలుగులోకి తెచ్చి ప్రచారం చేసే అనేక మంది రైతులు స్ఫూర్తి పొందుతారన్నారు. వ్యవసాయ సాగులో వస్తున్న మార్పులను రైతుల వద్దకు చేర్పించాలన్నారు. కార్యక్రమంలో విశ్వవిద్యాలయం డైరెక్టర్ డాక్టర్ నారాయణగౌడ, డాక్టర్ శైలజ, ఆర్.వసంత, డాక్టర్ కల్పన, డాక్టర్ కె.శివరాం, డాక్టర్ నారాయణరెడ్డి, సీవీ వెంకటేశ్‌మూర్తి, తదితరులు పాల్గొన్నారు.

For more information visit
University Library Website
Web - uasbagrilibindia.org
E-mail- librarian@uasbangalore.edu.in